ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 01-3-1990.

# *ಬ್ರಾಹ್ಮಣ ಜೀವನದ ಬುನಾದಿ- ದಿವ್ಯಬುದ್ಧಿ ಮತ್ತು ಆತ್ಮಿಕದೃಷ್ಟಿ.*

(ब्राहमण जीवन का फाउंडेशन – दिव्य बुध्धि और रूहानी द्रष्टि)

***ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.***

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ದಿವ್ಯಬುದ್ಧಿವಿಧಾತ ಮತ್ತು ಆತ್ಮಿಕ ದೃಷ್ಟಿದಾತ ಬಾಪ್‌ದಾದಾ ನಾಲ್ಕಾರು ಕಡೆಯ ದಿವ್ಯಬುದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳುವ ಮಕ್ಕಳನ್ನು ನೋಡುತ್ತಿದ್ದಾರೆ. ಪ್ರತಿಯೊಬ್ಬ ಬ್ರಾಹ್ಮಣ ಮಗುವಿಗೆ ಇವೆರಡೂ ವರದಾನಗಳು ಬ್ರಾಹ್ಮಣ ಜನ್ಮದಿಂದಲೇ ಪ್ರಾಪ್ತಿಯಾಗಿವೆ. ದಿವ್ಯಬುದ್ಧಿ ಮತ್ತು ಅತ್ಮಿಕದೃಷ್ಟಿ - ಇವು ಎಲ್ಲರಿಗೂ ಜನ್ಮಸಿದ್ದ ಅಧಿಕಾರದಲ್ಲಿ ಲಭಿಸಿವೆ. ಈ ವರದಾನವು ಬ್ರಾಹ್ಮಣ ಜೀವನದ ಬುನಾದಿ(ಫೌಂಡೇಷನ್) ಆಗಿದೆ. ಜೀವನ ಪರಿವರ್ತನೆ ಅಥವಾ ಮರುಜೀವಾ ಜನ್ಮ ಇವೆರಡೂ ಪ್ರಾಪ್ತಿಗಳಿಗೆ ಬ್ರಾಹ್ಮಣ ಜೀವನ ಎಂದು ಹೇಳಲಾಗುತ್ತದೆ. ಹಿಂದಿನ ಜೀವನ ಹಾಗೂ ವರ್ತಮಾನ ಬ್ರಾಹ್ಮಣ ಜೀವನ ಎರಡರ ಅಂತರವು ಇವೆರಡೂ ವಿಷಯಗಳದೇ ಆಗಿದೆ. ಇವೆರಡು ವಿಷಯಗಳ ಮೇಲೆ ಸಂಗಮಯುಗೀ ಪುರುಷಾರ್ಥಿಗಳಿಗೆ ಅಂಕಗಳು ಸಿಗುತ್ತವೆ. ಇವೆರಡು ವಿಷಯಗಳನ್ನು ಯಾರು ಸದಾ ಪ್ರತೀ ಸಂಕಲ್ಪದಲ್ಲಿ, ಮಾತಿನಲ್ಲಿ. ಕರ್ಮದಲ್ಲಿ ಎಷ್ಟು ಉಪಯೋಗಿಸುವರೋ ಅಷ್ಟೇ ಮೊದಲ ನಂಬರನ್ನು ಪಡೆಯುತ್ತಾರೆ. ಆತ್ಮಿಕ ದೃಷ್ಟಿ, ದೃಷ್ಟಿಯಿಂದ ವೃತ್ತಿ, ವೃತ್ತಿಯಿಂದ ಕೃತಿ ಸ್ವತಹ ಬದಲಾವಣೆಯಾಗುತ್ತದೆ. ದಿವ್ಯಬುದ್ಧಿಯ ಮೂಲಕ ಸ್ವಯಂನಪ್ರತಿ, ಸೇವೆಯಪ್ರತಿ ಬ್ರಾಹ್ಮಣ ಪರಿವಾರದ ಸಂಬಂಧ-ಸಂಪರ್ಕದಪ್ರತಿ ಸದಾ ಮತ್ತು ಸ್ವತಹ ಪ್ರತಿಯೊಂದು ಮಾತಿಗಾಗಿ ನಿರ್ಣಯವು ಯಥಾರ್ಥವಾಗಿರುತ್ತದೆ ಮತ್ತು ಎಲ್ಲಿ ದಿವ್ಯಬುದ್ಧಿಯ ಮೂಲಕ ಯಥಾರ್ಥ ನಿರ್ಣಯವಿರುವುದೋ ಅಲ್ಲಿ ನಿರ್ಣಯದ ಆಧಾರದ ಮೇಲೆ ಸ್ವಯಂ, ಸೇವೆ, ಸಂಬಂಧ- ಸಂಪರ್ಕವು ಯಥಾರ್ಥ ಶಕ್ತಿಶಾಲಿಯಾಗಿಬಿಡುತ್ತದೆ. ಮೂಲ ಮಾತೇ ಆಗಿದೆ- ದೃಷ್ಟಿ ಮತ್ತು ದಿವ್ಯಬುದ್ಧಿ.

ಇಂದು ಬಾಪ್‌ದಾದಾ ಎಲ್ಲಾ ಮಕ್ಕಳ ದಿವ್ಯಬುದ್ಧಿಯನ್ನು ಪರಿಶೀಲನೆ ಮಾಡುತ್ತಿದ್ದೆವು. ಎಲ್ಲದಕ್ಕಿಂತ ಮೊದಲು 1.ದಿವ್ಯಬುದ್ಧಿಯ ಮೊದಲ ಪರಿಶೀಲನೆ ಎಂದರೆ ಅವರು ಸದಾ ತಂದೆಯನ್ನು, ತನ್ನನ್ನು ಮತ್ತು ಪ್ರತಿಯೊಬ್ಬ ಬ್ರಾಹ್ಮಣ ಆತ್ಮನನ್ನು ಅವರು ಯಾರಾಗಿದ್ದಾರೆಯೋ, ಹೇಗಿದ್ದಾರೆಯೋ ಹಾಗೆಯೇ ಅರಿತುಕೊಂಡು ಆ ರೂಪದಲ್ಲಿ ತಂದೆಯಿಂದ ಎಷ್ಟು ತೆಗೆದುಕೊಳ್ಳಬೇಕೋ ಆ ಅಧಿಕಾರವನ್ನು ಸದಾ ಪ್ರಾಪ್ತಿ ಮಾಡಿಕೊಳ್ಳುತ್ತಾ ಇರುತ್ತಾರೆ. ತಂದೆಯು ಹೇಗೆ ತಯಾರು ಮಾಡಿದ್ದಾರೆಯೋ, ಸೇವೆಗೆ ನಿಮಿತ್ತವಾಗಿ

ಇಟ್ಟಿದ್ದಾರೆಯೋ, ತಂದೆಯು ಯಾವ ಬ್ರಾಹ್ಮಣ ಜೀವನದ ವಿಶೇಷತೆಗಳು ಹಾಗೂ ದಿವ್ಯಗುಣಗಳನ್ನು ನೀಡಿದ್ದಾರೆಯೋ, ಹೇಗೆ ನಿಮಿತ್ತ ಮಾಡಿದ್ದಾರೆಯೋ ಅದೇ ರೂಪದಿಂದ ತಮ್ಮನ್ನು ತಾವು ಅರಿತುಕೊಂಡು ಅದರಂತೆ ತನ್ನನ್ನು ಮುಂದುವರೆಸಿಕೊಳ್ಳುವುದು – ಇದಕ್ಕೆ ತಂದೆಯನ್ನು, ಸ್ವಯಂನ್ನು ಮತ್ತು ಬ್ರಾಹ್ಮಣ ಆತ್ಮರನ್ನು ಯಾರಾಗಿದ್ದಾರೆಯೋ, ಹೇಗಿದ್ದಾರೆಯೋ ಹಾಗೆಯೇ ಅರಿತು ಮುಂದುವರೆಸುವುದೆಂದು ಎಂದು ಹೇಳಲಾಗುತ್ತದೆ. ಇದು ದಿವ್ಯಬುದ್ಧಿಯ ಮೊದಲ ಪರಿಶೀಲನೆಯಾಗಿದೆ.

ದಿವ್ಯಬುದ್ಧಿ ಅರ್ಥಾತ್ ಪವಿತ್ರ ಹಂಸಬುದ್ಧಿ. ಹಂಸ ಎಂದರೆ ಸ್ವಚ್ಛತೆ. ಹಾಲು ಮತ್ತು ನೀರನ್ನು ಹಾಗೂ ಕಲ್ಲು ಮತ್ತು ಮುತ್ತನ್ನು ಗುರುತಿಸಿ ಮುತ್ತುಗಳನ್ನೇ ಗ್ರಹಿಸುವರು. ಇದು ಕಲ್ಲು. ಇದು ಮುತ್ತಾಗಿದೆ ಎಂಬುದು ತಿಳಿದಿರುತ್ತದೆ ಆದರೆ ಕಲ್ಲನ್ನು ಧಾರಣೆ ಮಾಡಿಕೊಳ್ಳುವುದಿಲ್ಲ ಆದ್ದರಿಂದ ಹೋಲಿ ಹಂಸವು ಸಂಗಮಯುಗಿ ಜ್ಞಾನಸ್ವರೂಪ ವಿದ್ಯಾದೇವಿ "ಸರಸ್ವತಿ"ಯ ವಾಹನವಾಗಿದೆ. ತಾವೆಲ್ಲರೂ ಜ್ಞಾನಸ್ವರೂಪರಾಗಿದ್ದೀರಿ ಆದ್ದರಿಂದ ವಿದ್ಯಾಪತಿ ಅಥವಾ ವಿದ್ಯಾದೇವಿಯರಾಗಿದ್ದೀರಿ. ಈ ವಾಹನವು ದಿವ್ಯಬುದ್ಧಿಯ ಸಂಕೇತವಾಗಿದೆ. ತಾವೆಲ್ಲಾ ಬ್ರಾಹ್ಮಣರು ಬುದ್ಧಿಯೋಗದ  ಮೂಲಕ ಈ ಮೂರು ಲೋಕದ ಪರ್ಯಟನೆ ಮಾಡುತ್ತೀರಿ. ಬುದ್ಧಿಗೂ ವಾಹನವೆಂದು ಹೇಳುತ್ತಾರೆ. ಈ ದಿವ್ಯ ಬುದ್ಧಿಯ ವಾಹನವು ಎಲ್ಲಾ ವಾಹನಗಳಗಿಂತಲೂ ವೇಗವಂತವಾದುದಾಗಿದೆ. ದಿವ್ಯ ಬುದ್ಧಿಯನ್ನು ಬುದ್ಧಿ ಬಲವೆಂದು ಕರೆಯಲಾಗುತ್ತದೆ. ಏಕೆಂದರೆ ಬುದ್ಧಿ ಬಲದಿಂದಲೇ ತಂದೆಯಿಂದ ಸರ್ವ ಶಕ್ತಿಗಳನ್ನು ಗ್ರಹಿಸಬಲ್ಲಿರಿ. ಆದ್ದರಿಂದ ಬುದ್ಧಿಬಲವೆಂದು ಹೇಳಲಾಗುತ್ತದೆ, ಹೇಗೆ ವೈಜ್ಞಾನಿಕ ಬಲವಿದೆ. ವೈಜ್ಞಾನಿಕ ಬಲದಿಂದ ಹದ್ದಿನ ಎಷ್ಟೊಂದು ಚಮತ್ಕಾರಗಳನ್ನು ತೋರಿಸುತ್ತಾರೆ. ಕೆಲವು ಮಾತುಗಳು ಯಾವುದು ಇಂದು ಮಾನವನಿಗೆ ಅಸಂಭವವೆನಿಸುತ್ತದೆಯೋ ಅದನ್ನು ಸಂಭವ ಮಾಡಿ ತೋರಿಸುತ್ತಾರೆ ಆದರೆ ಅದು ವಿನಾಶೀಬಲವಾಗಿದೆ. ವಿಜ್ಞಾನವು ಬುದ್ಧಿಬಲವಾಗಿದೆ ಆದರೆ ದಿವ್ಯಬುದ್ಧಿಬಲ ಅಲ್ಲ. ಸಾಂಸಾರಿಕ ಬುದ್ಧಿಯಾಗಿದೆ ಆದ್ದರಿಂದ ಈ ಸಂಸಾರದ ಪ್ರತಿ (ವಿಶ್ವ) ಪ್ರಕೃತಿಯ ಪ್ರತಿಯಾಗಿಯೇ ಆಲೋಚಿಸಬಲ್ಲರು ಮತ್ತು ಮಾಡಬಲ್ಲರು. ನಿಮ್ಮ ಬುದ್ಧಿಯ ಬಲವು ಮಾಸ್ಟರ್ ಸರ್ವಶಕ್ತಿವಂತರನ್ನಾಗಿ ಮಾಡುತ್ತದೆ. ಪರಮಾತ್ಮ ಪರಿಚಯ, ಪರಮಾತ್ಮವು ಮಿಲನ ಮತ್ತು ಪರಮಾತ್ಮ ಪ್ರಾಪ್ತಿಯ ಅನುಭೂತಿ ಮಾಡಿಸುತ್ತದೆ. ದಿವ್ಯಬುದ್ಧಿಯು ಏನು ಬೇಕೋ, ಹೇಗೆ ಬೇಕೋ ಅಸಂಭವವನ್ನೂ ಸಹ ಸಂಭವ ಮಾಡುವಂತದ್ದಾಗಿದೆ. ದಿವ್ಯಬುದ್ಧಿಯ ಮೂಲಕ ಪ್ರತೀಕರ್ಮದಲ್ಲಿ ಪರಮಾತ್ಮನ ಪ್ರೀತಿ(ಪವಿತ್ರ ಪ್ರೇರಣೆ)ಯನ್ನು ಅನುಭವ ಮಾಡಿ ಪ್ರತೀ ಕರ್ಮದಲ್ಲಿ ಸಫಲತೆಯ ಅನುಭವ ಮಾಡಬಲ್ಲಿರಿ. ದಿವ್ಯಬುದ್ಧಿಗೆ ಯಾವುದೇ ಮಾಯೆಯ ಯುದ್ಧಕ್ಕೆ ಸೋಲನ್ನುಂಟು ಮಾಡಿಸುವ ಶಕ್ತಿಯಿದೆ. ಎಲ್ಲಿ ಪರಮಾತ್ಮ ಪ್ರೇರಣೆಯಿರುವುದೋ, ಪವಿತ್ರ ಪ್ರೇರಣೆಯಿರುವುದೊ ಕಲಬೆರಕೆ ಇರುವುದಿಲ್ಲವೋ ಅಲ್ಲಿ ಮಾಯೆಯ ಪ್ರೇರಣೆ ಅಥವಾ ಯುದ್ಧವು ಅಸಂಭವವಾಗಿದೆ. ಮಾಯೆ ಬರುವುದಂತೂ ಬಿಟ್ಟುಬಿಡಿ ಸ್ಪರ್ಶಿಸುವುದಕ್ಕೂ ಸಾಧ್ಯವಿಲ್ಲ. ಮಾಯೆಯು ದಿವ್ಯಬುದ್ಧಿಯ ಮುಂದೆ ಸಫಲತೆಯ ವರಮಾಲೆಯಾಗಿಬಿಡುತ್ತದೆ. ಮಾಯೆಯಾಗಿರುವುದಿಲ್ಲ. ಹೇಗೆ ದ್ವಾಪರದ ರಜೋಗುಣಿ ಋಷಿ-ಮುನಿ ಆತ್ಮರು ಹುಲಿಯನ್ನೂ ಸಹ ತಮ್ಮ ಶಕ್ತಿಯಿಂದ ಶಾಂತವನ್ನಾಗಿ ಮಾಡಿಬಿಡುತ್ತಿದ್ದರಲ್ಲವೆ. ಹುಲಿಯು ಜೊತೆಗಾರನಾಗಿಬಿಡುತ್ತಿತ್ತು, ವಾಹನವಾಗಿಬಿಡುತ್ತಿತ್ತು. ಆಟಿಕೆಯಾಗುತ್ತಿತ್ತು. ಪರಿವರ್ತನೆಯಾಗಿಬಿಡುತ್ತದೆ ಅಲ್ಲವೆ ಅಂದಾಗ ತಾವು ಸತೋಪ್ರಧಾನರು, ಮಾಸ್ಟರ್ ಸರ್ವಶಕ್ತಿವಂತರು, ದಿವ್ಯಬುದ್ಧಿ ವರದಾನಿಗಳ ಮುಂದೆ ಮಾಯೆಯು ಎಷ್ಟುಮಾತ್ರ! ಮಾಯೆಯು ಶತ್ರುವಿನಿಂದ ಪರಿವರ್ತನೆಯಾಗಲು ಸಾಧ್ಯವಿಲ್ಲವೆ! ದಿವ್ಯಬುದ್ಧಿಯ ಬಲವು ಅತಿಶ್ರೇಷ್ಠ ಬಲವಾಗಿದೆ. ಕೇವಲ ಇದನ್ನು ಉಪಯೋಗಿಸಿರಿ ಎಂತಹ ಸಮಯವೋ ಅಂತಹ ವಿಧಿಯಿಂದ ಉಪಯೋಗಿಸಿರಿ ಆಗ ಸರ್ವಸಿದ್ಧಿಗಳು ತಮ್ಮ ಅಂಗೈಯಲ್ಲಿರುತ್ತವೆ. ಸಿದ್ಧಿಯು ಯಾವುದೇ ದೊಡ್ಡಮಾತಲ್ಲ. ಕೇವಲ ದಿವ್ಯಬುದ್ಧಿಯ ಚಳಕವಾಗಿದೆ. ಹೇಗೆ ಇತ್ತೀಚಿನ ಜಾದುಗಾರರು ಕೈಚಳಕವನ್ನು ತೋರಿಸುತ್ತಾರಲ್ಲವೆ! ಈ ದಿವ್ಯಬುದ್ಧಿಯ ಚಳಕವು ಸರ್ವಸಿದ್ಧಿಗಳನ್ನು ಅಂಗೈಯಲ್ಲಿ ತಂದುಬಿಡುತ್ತದೆ. ತಾವೆಲ್ಲಾ ಬ್ರಾಹ್ಮಣ ಆತ್ಮರು ಸರ್ವಸಿದ್ಧಿಗಳನ್ನು ಪ್ರಾಪ್ತಿ ಮಾಡಿಕೊಂಡಿದ್ದೀರಿ ಆದರೆ ದಿವ್ಯಸಿದ್ಧಿಗಳು ಸಾಧಾರಣವಲ್ಲ ಆದ್ದರಿಂದ ತಮ್ಮ ಮೂರ್ತಿಗಳ ಮೂಲಕ ಇಂದಿಗೂ ಸಹ ಭಕ್ತರು ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳಲು ಹೋಗುತ್ತಾರೆ. ನೀವು ಸಿದ್ಧಿಸ್ವರೂಪರಾಗಿದ್ದೀರಿ ಆದ್ದರಿಂದಲೇ ಭಕ್ತರು ತಮ್ಮಿಂದ ಬೇಡಲು ಹೋಗುತ್ತಾರೆ. ಅಂದಮೇಲೆ ದಿವ್ಯಬುದ್ಧಿಯ

ಚಮತ್ಕಾರವೇನೆಂಬುದನ್ನು ತಿಳಿದುಕೊಂಡಿದ್ದೀರಾ! ದಿವ್ಯಬುದ್ಧಿಯ ಚಮತ್ಕಾರವು ಸ್ಪಷ್ಟವಾಯಿತಲ್ಲವೆ. ಆದರೆ ಇಂದು ಏನು ನೋಡಿರಬಹುದು? ಏನನ್ನು ನೋಡಿರಬಹುದು? ಟೀಚರ್ಸ್ ಹೇಳುವಿರಾ?

ನಿಮಿತ್ತ ಶಿಕ್ಷಕಿಯರಂತೂ ತಂದೆಯ ಸಮಾನ ಮಾಸ್ಟರ್ ಶಿಕ್ಷಕರಾಗಿಬಿಟ್ಟಿದ್ದೀರಲ್ಲವೆ. **ಟೀಚರ್ ಅರ್ಥಾತ್ ಪ್ರತೀ ಸಂಕಲ್ಪ, ಮಾತು ಮತ್ತು ಪ್ರತೀ ಸೆಕೆಂಡ್ ಸೇವೆಯಲ್ಲಿ ಉಪಸ್ಥಿತರು. ಇಂತಹ ಸೇವಾಧಾರಿಗಳಿಗೆ ಬಾಪ್‌ದಾದಾರವರು ಟೀಚರ್ ಎಂದು ಹೇಳುತ್ತೇವೆ.** ಪ್ರತೀ ಸಮಯ ವಾಣಿಯ ಮೂಲಕ ಸೇವೆಯನ್ನಂತೂ ಮಾಡಲು ಸಾಧ್ಯವಿಲ್ಲ, ಸುಸ್ತಾಗಿಬಿಡುತ್ತೀರಲ್ಲವೆ ಆದರೆ ತಮ್ಮ ಲಕ್ಷಣಗಳ ಮೂಲಕ ಪ್ರತೀ ಸಮಯ ಸೇವೆ ಮಾಡಬಲ್ಲಿರಿ. ಇದರಲ್ಲಿ ಸುಸ್ತಾಗುವ ಮಾತಿಲ್ಲ. ಇದನ್ನಂತೂ ಮಾಡಲು ಸಾಧ್ಯವಿದೆಯಲ್ಲವೆ. ಶಿಕ್ಷಕಿಯರು ವಾಚಾಸೇವೆಯನ್ನಂತೂ ಯಥಾಶಕ್ತಿ ಸಮಯ ಪ್ರಮಾಣವಾಗಿಯೇ ಮಾಡುತ್ತೀರಿ ಆದರೆ ಭವಿಷ್ಯದ ಫರಿಶ್ತೆಯ ಫೀಚರ್ಸ್ (ಲಕ್ಷಣಗಳು) ಇರಲಿ. ಸಂಗಮಯುಗದ ಫ್ಯೂಚರ್ ಫರಿಶ್ತಾಸ್ಥಿತಿಯಾಗಿದೆ. ಅದು ಈಗ ಲಕ್ಷಣದಲ್ಲಿ ಕಂಡುಬರಲಿ ಆಗ ಎಷ್ಟು ಒಳ್ಳೆಯ ಸೇವೆಯಾಗುವುದು? ಯಾವಾಗ ತಮ್ಮ ಜಡಚಿತ್ರಗಳು ಫೀಚರ್ಸ್ ನ ಮೂಲಕವೇ ಅಂತಿಮ ಜನ್ಮದವರೆಗೂ ಸೇವೆ ಮಾಡುತ್ತಿವೆ ಅಂದಮೇಲೆ ತಾವು ಚೈತನ್ಯ ಶ್ರೇಷ್ಠಆತ್ಮರು ತಮ್ಮ ಲಕ್ಷಣಗಳ ಮೂಲಕ ಸೇವೆಯನ್ನು ಸಹಜವಾಗಿ ಮಾಡಬಲ್ಲಿರಿ. ತಮ್ಮ ಲಕ್ಷಣಗಳಲ್ಲಿ ಸದಾ ಸುಖದ, ಶಾಂತಿಯ, ಖುಷಿಯ ಹೊಳಪಿರಲಿ ಎಂತಹದ್ದೇ ದುಃಖಿ, ಅಶಾಂತ ಆತ್ಮನು ಚಿಂತಿತ ಆತ್ಮನು ತಮ್ಮ ಲಕ್ಷಣಗಳ ಮೂಲಕವೇ ಅವರ ಶ್ರೇಷ್ಠ ಭವಿಷ್ಯವನ್ನು ತಯಾರು ಮಾಡಿಕೊಳ್ಳಬಹುದು. ಇಂತಹ ಅನುಭವವಿದೆಯಲ್ಲವೆ. ಅಮೃತವೇಳೆ ತಮ್ಮ ಲಕ್ಷಣಗಳನ್ನು ಪರಿಶೀಲಿಸಿಕೊಳ್ಳಿರಿ. ಹೇಗೆ ತಮ್ಮ ಮುಖವನ್ನು ಪರಿಶೀಲನೆ ಮಾಡಿಕೊಳ್ಳುತ್ತೀರಲ್ಲವೆ ಹಾಗೆಯೇ ಫರಿಶ್ತಾ ಲಕ್ಷಣಗಳಲ್ಲಿ ಖುಷಿಯ, ಶಾಂತಿಯ, ಸುಖದ ಶೃಂಗಾರವು ಸರಿಯಾಗಿದೆಯೇ? - ಇದನ್ನು ಪರಿಶೀಲಿಸಿಕೊಂಡಾಗ ಸ್ವತಹ ಮತ್ತು ಸಹಜವಾಗಿ ಸೇವೆಯಾಗುತ್ತಿರುವುದು. ಶಿಕ್ಷಕಿಯರಿಗೆ ಇದು ಸಹಜವೆನಿಸುತ್ತದೆಯಲ್ಲವೆ. ಇದನ್ನು 12 ಗಂಟೆಗಳು ಬೇಕಾದರೂ ಮಾಡಬಲ್ಲಿರಿ. ಈ ವಾಚಾಸೇವೆಯನ್ನಂತೂ 2-4 ಗಂಟೆಗಳು ಮಾತ್ರವೇ ಮಾಡುತ್ತೀರಿ. ಯೋಜನೆಯ ಸೇವೆ, ಭಾಷಣದ ಸೇವೆ ಮಾಡುತ್ತೀರೆಂದರೆ ಸುಸ್ತಾಗುತ್ತೀರಿ ಆದರೆ ಇದರಲ್ಲಂತೂ ದಣಿಯುವ ಮಾತೇ ಇಲ್ಲ. ಸ್ವಾಭಾವಿಕವಲ್ಲವೆ! ಹೇಳುವುದಾದರೆ ಎಲ್ಲರೂ ಅನುಭವಿಗಳಾಗಿದ್ದೀರಿ ಆದರೆ ಬಾಪ್‌ದಾದಾ ನೋಡಿದೆವು- ವಿದೇಶದಲ್ಲಿ ನಾಯಿ ಮತ್ತು ಬೆಕ್ಕುಗಳನ್ನು ಬಹಳ ಸಾಕುತ್ತಾರೆ. ಅದೇರೀತಿಯ ಆಟಿಕೆಗಳನ್ನು ಇಲ್ಲಿಯೂ ತರುತ್ತಾರೆ. ಒಂದು ಮಾತೇನೆಂದರೆ ಬಹಳ ಚೆನ್ನಾಗಿ ಅನುಭವ ಮಾಡುತ್ತೀರಿ ಆದರೆ ಕೆಲವೊಮ್ಮೆ ಬೆಕ್ಕು ಬಂದುಬಿಡುತ್ತದೆ. ಇನ್ನೂ ಕೆಲವೊಮ್ಮೆ ಯಾವುದೋ ನಾಯಿಯು ಬಂದುಬಿಡುತ್ತದೆ. ಅವನ್ನು ಓಡಿಸುವುದರಲ್ಲಿಯೇ ಸಮಯ ತೊಡಗಿಸುತ್ತೀರಿ. ಆದರೆ ಇಂದು ತಿಳಿಸಿದೆವಲ್ಲವೆ - ಮಾಯೆಯು ತಮ್ಮ ಸಫಲತೆಯ ಮಾಲೆಯಾಗಿಬಿಡುವುದು. ಎಲ್ಲಾ ನಿಮಿತ್ತ ಸೇವಾಧಾರಿಗಳ ಕೊರಳಿನಲ್ಲಿ ಮಾಲೆಯು ಹಾಕಲ್ಪಟ್ಟಿದೆ. ಸಫಲತೆಯ ಮಾಲೆಯಿದೆಯೋ ಅಥವಾ ಕೆಲಕೆಲವೊಮ್ಮೆ ಮಾಲೆಯೂ ಕೊರಳಿನಲ್ಲಿದ್ದರೂ ಸಹ ಕಂಡುಬರುವುದಿಲ್ಲವೋ? ಸಫಲತೆಯು ಸಿಗಲಿ ಎಂದು ಹೊರಗೆ ಹುಡುಕಾಡುತ್ತಾ ಇರುತ್ತೀರಾ! ಹೇಗೆ ರಾಣಿಯ ಕಂಠಹಾರದ ಕಥೆಯನ್ನು ತಿಳಿಸುತ್ತಾರಲ್ಲವೆ. ಕೊರಳಿನಲ್ಲಿ ಹಾರವಿದ್ದರೂ ಸಹ ಹೊರಗಡೆ ಹುಡುಕಾಡುತ್ತಿದ್ದಳು. ಆ ರೀತಿ ಮಾಡುವುದಿಲ್ಲ ತಾನೆ. ಸಫಲತೆಯು ಪ್ರತಿಯೊಬ್ಬ ಬ್ರಾಹ್ಮಣ ಆತ್ಮನ ಅಧಿಕಾರವಾಗಿದೆ. ಎಲ್ಲಾ ಟೀಚರ್ಸ್ ಸಫಲತಾಮೂರ್ತಿಗಳು ಆಗಿದ್ದೀರಲ್ಲವೆ ಅಥವಾ ಪುರುಷಾರ್ಥಿ ಮೂರ್ತಿಗಳು, ಪರಿಶ್ರಮಮೂರ್ತಿಗಳಾಗಿದ್ದೀರಾ? ಪುರುಷಾರ್ಥವೂ ಸಹ ಸಹಜ ಪುರುಷಾರ್ಥ, ಪರಿಶ್ರಮದ್ದಲ್ಲ. ಯಥಾರ್ಥ ಪುರುಷಾರ್ಥದ ಪರಿಭಾಷೆಯೇ ಆಗಿದೆ ಸ್ವಾಭಾವಿಕ ಅಟೆನ್ಶನ್. ಕೆಲವರು ಹೇಳುತ್ತಾರೆ - ಅಟೆನ್ಶನ್ ಇಡಬೇಕಲ್ಲವೆ ಎಂದು. ಆದರೆ ಅಟೆನ್ಶನ್ ಟೆನ್ಶನ್‌ನಲ್ಲಿ ಬದಲಾಗುತ್ತದೆ. ಇದು ಗೊತ್ತೇ ಆಗುವುದಿಲ್ಲ. ನ್ಯಾಚುರಲ್ ಅಟೆನ್ಶನ್ ಅರ್ಥಾತ್ ಯಥಾರ್ಥ ಪುರುಷಾರ್ಥಿ.

ಟೀಚರ್ಸ್‌ನೊಂದಿಗೆ ಬಾಪ್‌ದಾದಾರವರಿಗೆ ಪ್ರೀತಿಯಿದೆ ಆದ್ದರಿಂದ ಪರಿಶ್ರಮಪಡಲು ಬಿಡುವುದಿಲ್ಲ, ಹೃದಯದ ಪ್ರೀತಿಯು ಇದೇ ಆಗಿದೆಯಲ್ಲವೆ! ಒಳ್ಳೆಯದು. ಇನ್ನೊಂದುಬಾರಿ ಮತ್ತೇನನ್ನು ನೋಡಿದೆವು ಎಂಬುದನ್ನು ತಿಳಿಸುತ್ತೇವೆ. ಸ್ವಲ್ಪ-ಸ್ವಲ್ಪವಾಗಿ ತಿಳಿಸುತ್ತೇವೆ. ಎಲ್ಲರ ಮನಸ್ಸಿನ ಪಟಲದಲ್ಲಿ ತಮ್ಮ ಚಿತ್ರವಂತೂ ಬರುತ್ತಿದೆ. ದೇಶ-ವಿದೇಶದಲ್ಲಿ ಸೇವೆಯ ಅಲೆಯು ಚೆನ್ನಾಗಿದೆ.

ಭಾರತದ ಸಮ್ಮೇಳನಗಳೂ ಸಹ ಬಹಳ ಚೆನ್ನಾಗಿ ಸಫಲವಾಯಿತು. ಸಫಲತೆಯ ಚಿಹ್ನೆಯಾಗಿದೆ-ಸಫಲತೆಯ ಸುಗಂಧದಲ್ಲಿ ಬರುವಂತಹ ಅತ್ಮರು ತಮ್ಮ ಉಮ್ಮಂಗ-ಉತ್ಸಾಹದಿಂದ ಸಂಖ್ಯೆಯಲ್ಲಿ ಹೆಚ್ಚುತ್ತಾ ಹೋಗುತ್ತಾರೆ. ಒಳ್ಳೆಯದರ ಚಿಹ್ನೆಯು ಇದೇ ಆಗಿದೆ- ಎಲ್ಲರಲ್ಲಿ ನೋಡುವ, ಕೇಳುವ, ಪಡೆಯುವ ಇಚ್ಛೆಯು ಹೆಚ್ಚಾಗುತ್ತಿದೆ. ಇದು ಒಳ್ಳೆಯ ಸೇವೆಯ ಗುರುತಾಗಿದೆ ಆದ್ದರಿಂದ ಸಂಖ್ಯೆಯು ಕಡಿಮೆ ಆಗುವುದೇನೋ ಎಂದು ಆಲೋಚಿಸಬೇಡಿ. ಒಂದುವೇಳೆ ಒಳ್ಳೆಯದನ್ನು ಮಾಡುತ್ತೀರೆಂದರೆ ಇಚ್ಛೆಯೂ ಹೆಚ್ಚುವುದು, ಸಂಖ್ಯೆಯೂ ಹೆಚ್ಚುವುದು. ವಿದೇಶದ ರಿಟ್ರೀಟ್ ನಲ್ಲಿರಲಿ, ಸಮ್ಮೇಳನಗಳಲ್ಲಿರಲಿ. ಎರಡರ ಫಲಿತಾಂಶವು ದಿನ-ಪ್ರತಿದಿನ ಬಹಳ ಚೆನ್ನಾಗಿ ಕಂಡುಬರುತ್ತಿದೆ. ಎಲ್ಲದಕ್ಕಿಂತ ಒಳ್ಳೆಯ ಫಲಿತಾಂಶವೇನೆಂದರೆ ಮೊದಲು ವಿದೇಶದಲ್ಲಿ ಹೇಳುತ್ತಿದ್ದರು - ಬ್ರಹ್ಮಾಕುಮಾರಿಯರ ಹೆಸರಿಟ್ಟರೆ ಯಾರೂ ಬರುವುದಿಲ್ಲ ಎಂದು. ಈಗಂತೂ ಡೈರೆಕ್ಟ್ ಬ್ರಹ್ಮಾಕುಮಾರಿಯರ ಆಶ್ರಮದಲ್ಲಿ ರಿಟ್ರೀಟ್ ಮಾಡಲು ಹೋಗುತ್ತಿದ್ದೇವೆ. ರಾಜಯೋಗವನ್ನು ಕಲಿಯಲು ಹೋಗುತ್ತಿದ್ದೇವೆ ಎಂದು ತಿಳಿಯುತ್ತಾರೆ. ಅಂದಮೇಲೆ ಇದು ಪರದೆಯ ಹೊರಗಡೆ ಬಂದಿರುವುದಾಗಿದೆ ಅಂದರೆ ಮುಸುಕು ತೆರೆದಿದೆ. ಮಧುಬನ ನವಾಸಿಗಳು ಅಥವಾ ಸೇವಾಧಾರಿಗಳೆಲ್ಲರೂ ಭಾರತದ ಅನೇಕ ಸ್ಥಾನಗಳಿಂದ ಬಂದು ಸೇವೆ ಮಾಡಿರಬಹುದು. ಮಧುಬನ ನಿವಾಸಿ ಹಾಗೂ ನಾಲ್ಕಾರು ಕಡೆಯ ಸೇವಾಧಾರಿಗಳು ಸ್ನೇಹದಿಂದ ಮಾತುಗಳನ್ನು ನೋಡದೆ ವಿಶ್ರಾಂತಿಯನ್ನು ಲೆಕ್ಕಿಸದೆ ಒಳ್ಳೆಯ ಅವಿಶ್ರಾಂತ ಸೇವೆ ಮಾಡಿದ್ದೀರಿ ಆದ್ದರಿಂದ ಬಾಪ್‌ದಾದಾ ನಾಲ್ಕಾರು ಕಡೆಯ ಅವಿಶ್ರಾಂತ ಸೇವೆಯ ಸಫಲತೆಯನ್ನು ಪ್ರಾಪ್ತಿ ಮಾಡಿಕೊಳ್ಳುವಂತಹ ವಿಶೇಷ ಮಕ್ಕಳಿಗೆ ಸೇವೆಯ ಶುಭಾಷಯಗಳು, ಹೃದಯದ ಶುಭಾಷಯಗಳನ್ನು ತಿಳಿಸುತ್ತಿದ್ದೇವೆ. ಸಂದೇಶದ ಕೂಗು ನಾಲ್ಕಾರು ಕಡೆ ಮೊಳಗುತ್ತಾ ಹರಡುತ್ತಿದೆ. ಒಳ್ಳೆಯದು-

**ಸರ್ವದಿವ್ಯಬುದ್ಧಿ ಆತ್ಮಿಕ ವರದಾನಿ ಆತ್ಮರಿಗೆ, ಸದಾ ಬುದ್ಧಿಬಲವನ್ನು ಸಮಯಪ್ರಮಾಣ, ಕಾರ್ಯಪ್ರಮಾಣ ಉಪಯೋಗಿಸುವಂತಹ ಜ್ಞಾನಸ್ವರೂಪ ಆತ್ಮರಿಗೆ, ಸದಾ ತಮ್ಮ ಫರಿಶ್ತಾಲಕ್ಷಣಗಳಮೂಲಕ ಅಖಂಡ ಸೇವೆ ಮಾಡುವಂತಹ ಸ್ವತಹ-ಸಹಜ ಪುರುಷಾರ್ಥಿ ಆತ್ಮರಿಗೆ, ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ಡಬಲ್ ವಿದೇಶಿ ಸಹೋದರ-ಸಹೋದರಿಯರ ಭಿನ್ನ-ಭಿನ್ನ ಗ್ರೂಪ್‌ಗಳೊಂದಿಗೆ ಅವ್ಯಕ್ತ ಬಾಪ್‌ದಾದಾರವರ ವಾರ್ತಾಲಾಪ:-**

1. ಎಲ್ಲರೂ ತಮ್ಮ ಶ್ರೇಷ್ಠ ಭಾಗ್ಯವನ್ನು ನೋಡುತ್ತಾ ಹರ್ಷಿತರಾಗುತ್ತಾ ಇದ್ದೀರಾ? ಭಲೆ ಯಾರೆಷ್ಟಾದರೂ ಬರಲಿ ಆದರೆ ತಮ್ಮ ಭಾಗ್ಯವಂತು ಸದಾ ಇದ್ದೇ ಇರುತ್ತದೆ. ತಾವು ಅವರನ್ನು ಮುಂದುವರೆಸುತ್ತಿದ್ದರೂ ಮುಂದೆ ಇರುತ್ತೀರಿ ಏಕೆಂದರೆ ಮುಂದುವರೆಸುವವರು ಸ್ವತಹವಾಗಿಯೇ ಮುಂದೆ ಇರುತ್ತಾರೆ. ಅನ್ಯರನ್ನು ಮುಂದಿಡುವುದರಿಂದ ತಮ್ಮ ಪುಣ್ಯವು ಜಮಾ ಆಗಿಬಿಡುತ್ತದೆ ಹಾಗಾದರೆ ಮುಂದುವರೆದಿದ್ದೀರಲ್ಲವೆ! ಈ ಲಕ್ಷ್ಯವು ಸದಾ ಪ್ರತೀ ಹೆಜ್ಜೆಯಲ್ಲಿರಲಿ- ಮುಂದುವರೆಯಬೇಕು ಹಾಗೂ ಮುಂದುವರೆಸಬೇಕು. ತಂದೆಯು ಹೇಗೆ ಮಕ್ಕಳನ್ನು ಮುಂದಿಟ್ಟರು, ಸ್ವಯಂ ಬೆನ್ನೆಲುಬಾಗಿದ್ದರು ಆದರೆ ಮಕ್ಕಳನ್ನು ಮುಂದಿಟ್ಟರು. ಅಂದಮೇಲೆ ಫಾಲೋ ಫಾದರ್ ಮಾಡುವವರಲ್ಲವೆ! ಸಂಗಮಯುಗದಲ್ಲಿ ಯಾರೆಷ್ಟು ತಂದೆಯನ್ನು ಫಾಲೋ ಮಾಡುತ್ತೀರಿ ಅಷ್ಟೇ ವಿಶ್ವದ ರಾಜ್ಯ ಸಿಂಹಾಸನದಲ್ಲಿಯೂ ನಂಬರ್‌ವಾರ್ ಫಾಲೋ ಮಾಡುವಿರಿ. ಸಿಂಹಾಸನ ಪಡೆಯಬೇಕೆ ಅಥವಾ ಸಿಂಹಾಸನಧಾರಿಗಳನ್ನು ನೋಡುವಿರಾ? (ಆಸೀನರಾಗಬೇಕು) ಸತ್ಯಯುಗದಲ್ಲಂತು 8 ಮಂದಿ ಕುಳಿತುಕೊಳ್ಳುವರು. ಮತ್ತೇನು ಮಾಡುವಿರಿ? ಸ್ವಲ್ಪ ಸಮಯವಷ್ಟೇ ಅನುಭವಿಸುವಿರಾ! ಯಾವಾಗ ವಿಶ್ವ ಮಹಾರಾಜನು ತನ್ನ ಮಹಲಿನಲ್ಲಿ ಹೋಗುವನೋ ಆಗ ತಾವು ಕುಳಿತುಕೊಂಡು ನೋಡುವಿರಾ! ಮತ್ತೇನು ಮಾಡುವಿರಿ? ಈ ಸಮಯದಲ್ಲೆಷ್ಟು - ಸದಾ ತಂದೆಯ ಜೊತೆ ತಿನ್ನುತ್ತಾ-ಕುಡಿಯುತ್ತಾ ಇರುತ್ತೀರಿ, ಆಡುವುದು-ವಿದ್ಯಾಭ್ಯಾಸ ಮಾಡುತ್ತೀರಿ. ಅಷ್ಟೇ ಅಲ್ಲಿಯೂ ಜೊತೆಯಿರುತ್ತೀರಿ. ಅಂದಮೇಲೆ ಬ್ರಹ್ಮಾ ತಂದೆಯೊಂದಿಗೆ ಬಹಳ ಪ್ರೀತಿಯಿದೆಯಲ್ಲವೆ! ಬ್ರಹ್ಮಾ ತಂದೆಯ ಮುದ್ದಾದ ಬ್ರಹ್ಮಾಕುಮಾರ ಹಾಗೂ ಬ್ರಹ್ಮಾಕುಮಾರಿಯರು ಆಗಿದ್ದಾರೆ! ಎಂಬುದು ಬಾಪ್‌ದಾದಾರವರಿಗೂ ಖುಷಿಯಿದೆ.

ಬ್ರಹ್ಮಾ ತಂದೆಯ ಜೊತೆ ಅನೇಕ ಜನ್ಮಗಳವರೆಗೆ ಸಮೀಪವಿರುತ್ತೀರಿ, ಜೊತೆಯಿರುತ್ತೀರಿ. 21 ಜನ್ಮಗಳಂತು ಗ್ಯಾರಂಟಿಯಿದೆ. ಭಿನ್ನ ನಾಮ ರೂಪದಿಂದ ಬ್ರಹ್ಮಾರವರ ಆತ್ಮನ ಜೊತೆ ಸಂಬಂಧದಲ್ಲಿ ಇರುತ್ತೇವೆ- ಇದು ತಮ್ಮ ಹೃದಯದಲ್ಲಿಯೂ ಬರುತ್ತದೆಯೇ ಅಥವಾ ಕೇಳುತ್ತಿದ್ದೀರಿ ಆದ್ದರಿಂದ ಹೇಳುತ್ತೀರಾ? ಅನುಭವವಾಗುವುದೇ? ಸಮೀಪತೆಯ ಸ್ಮೃತಿಯೆಷ್ಟು ಇರುತ್ತದೆಯೋ ಅಷ್ಟೇ ಸ್ವಾಭಾವಿಕವಾದ ನಶೆ, ನಿಶ್ಚಯವೂ ಸ್ವತಹವಾಗಿ ಇರುತ್ತದೆ. ಹೃದಯದಿಂದ ಸದಾ ಈ ಅನುಭವ ಮಾಡಿರಿ- ಅನೇಕ ಬಾರಿ ತಂದೆಯ ಸಂಗಾತಿಯಾಗಿದ್ದೇನೆ. ಈಗಲೂ ಸಂಗಾತಿ ಆಗಿದ್ದೇನೆ. ಅನೇಕ ಬಾರಿ ಆಗುತ್ತಿರುತ್ತೇನೆ. ಮಕ್ಕಳ ಅವಿನಾಶಿ ಪುರುಷಾರ್ಥವನ್ನು ನೋಡುತ್ತಾ ಬಾಪ್‌ದಾದಾರವರಿಗೆ ವಿಶೇಷ ಖುಷಿಯಾಗುವುದು. ಸದಾ ಮಾತಾ-ಪಿತ ಹಾಗೂ ಪರಿವಾರದ ಪುಟ್ಟ ಮಕ್ಕಳ ಮೇಲೆ ವಿಶೇಷ ಪ್ರೀತಿಯಿರುತ್ತದೆ ಹಾಗೂ ಎಲ್ಲರ ಪ್ರೀತಿಯೇ ಅವರನ್ನು ಮುಂದುವರೆಸುತ್ತದೆ. ಬಾಪ್‌ದಾದಾರವರು ಸದಾ ನೋಡುತ್ತಾ ಇರುತ್ತಾರೆ- ಯಾವ ಮಗು ಎಷ್ಟು ಮುಂದುವರೆಯುತ್ತಿದೆ ಹಾಗೂ ಸೇವೆಯಲ್ಲಿ ಎಷ್ಟು ವೃದ್ಧಿಯನ್ನು ಮಾಡುತ್ತಿದೆ! ಹಾಗಾದರೆ ಸದಾ ಇದೇ ವರದಾನವನ್ನು ನೆನಪಿಟ್ಟುಕೊಳ್ಳಿರಿ- ಸದಾ ನಿರಂತರ ಹಾಗೂ ಸ್ವಾಭಾವಿಕ ಪುರುಷಾರ್ಥವಿರಬೇಕು. ಈ ವರ್ಷದಲ್ಲಿ ಇದೇ ವರದಾನವನ್ನು ಸ್ಮೃತಿಯಲ್ಲಿ ಇಟ್ಟುಕೊಳ್ಳುತ್ತಾ ಸ್ಮೃತಿಸ್ವರೂಪರಾಗಿರಿ. ಪ್ರತಿಯೊಬ್ಬರೂ ಈ ವರದಾನವನ್ನು ನನಗೇ ವ್ಯಕ್ತಿಗತವಾಗಿ ಕೊಟ್ಟಿದ್ದಾರೆಂದು ತಿಳಿಯಿರಿ. ಒಳ್ಳೆಯದು-

ಎಲ್ಲರೂ ವ್ಯಸ್ತವಾಗಿರುತ್ತೀರಿ ಅಲ್ಲವೆ! ಯಾರು ವ್ಯಸ್ತವಾಗಿರುತ್ತಾರೆಯೋ ಅವರ ಬಳಿ ಮಾಯೆಯು ಬರುವುದಿಲ್ಲ ಏಕೆಂದರೆ ತಮ್ಮ ಬಳಿ ಅದನ್ನು ಸ್ವೀಕರಿಸಲು ಸಮಯವೇ ಇಲ್ಲ. ಅಂದಮೇಲೆ ಇಷ್ಟು ವ್ಯಸ್ತವಾಗಿರುತ್ತೀರಾ ಅಥವಾ ಕೆಲವೊಮ್ಮೆ ಸ್ವೀಕರಿಸುತ್ತೀರಾ? ಬ್ರಾಹ್ಮಣರಾಗಿರುವುದಾದರೂ ಏತಕ್ಕಾಗಿ? ವ್ಯಸ್ತವಾಗಿ ಇರುವುದಕ್ಕಾಗಿ ಅಲ್ಲವೆ! ಬಾಪ್‌ದಾದಾರವರು ತಮಾಷೆಯಲ್ಲಿ ಹೇಳುತ್ತಾರೆ- ವ್ಯಸ್ತವಾಗಿ ಇರುವವರೇ ಅತ್ಯಂತ ದೊಡ್ಡ ವ್ಯಾಪಾರಗಾರ ಆಗಿದ್ದಾರೆ. ಇಡೀ ದಿನದಲ್ಲಿ ಎಷ್ಟೊಂದು ಶ್ರೇಷ್ಠವಾದ ವ್ಯಾಪಾರ ಮಾಡುತ್ತೀರಿ! ಲೆಕ್ಕ ಗೊತ್ತಿದೆಯೇ? ಲೆಕ್ಕವನ್ನಿಡುವುದು ಬರುತ್ತದೆಯೇ? ಪ್ರತೀ ಹೆಜ್ಜೆಯಲ್ಲಿ ಪದಮಗಳ ಸಂಪಾದನೆಯಿದೆ. ಹೆಜ್ಜೆಯ ಪದಮ- ಇಂತಹ ವ್ಯಾಪಾರವನ್ನು ಇಡೀ ಕಲ್ಪದಲ್ಲಿ ಯಾರೂ ಮಾಡಿಕೊಳ್ಳಲು ಸಾಧ್ಯವಿಲ್ಲ. ಅಂದಮೇಲೆ ಎಷ್ಟು ಜಮಾ ಆಗುವುದೋ ಅದರ ಖುಷಿಯಾಗುವುದು. ಅತ್ಯಂತ ಹೆಚ್ಚು ಖುಷಿ ಯಾರಿಗಾಗುವುದು? ನಶೆಯಿಂದ ಹೇಳಿರಿ- ನಾವು ಖುಷಿಯಾಗದಿದ್ದರೆ ಮತ್ತಾರು ಆಗುವರು! ಈ ನಶೆಯೂ ಹೌದು ಆದರೆ ನಿರ್ಮಾಣತೆಯಾಗಿದೆ. ಹೇಗೆ ಒಳ್ಳೆಯ ವೃಕ್ಷದ ಚಿಹ್ನೆಯಲ್ಲಿ ಫಲ ತುಂಬಿರುವುದಾಗಿರುತ್ತದೆ ಆದರೆ ಬಾಗುತ್ತದೆ. ಇಂತಹ ನಶೆಯಿದೆಯೇ? ಅಂದಾಗ ಎರಡೂ ಒಟ್ಟೊಟ್ಟಿಗೆ ಇರಲಿ. ತಮ್ಮೆಲ್ಲರ ಸ್ವಾಭಾವಿಕ ಜೀವನವೇ ಇದಾಗಿಬಿಟ್ಟಿತು. ಯಾರನ್ನೇ ನೋಡುತ್ತೀರೆಂದರೆ, ಇವೆಲ್ಲರೂ ಒಂದೇ ಪರಿವಾರದ ಆತ್ಮರಾಗಿದ್ದಾರೆ ಎಂಬ ಸ್ಮೃತಿಯಿಂದ ನೋಡುತ್ತೀರಿ ಆದ್ದರಿಂದ ನಷ್ಟವಿರುವ ನಶೆಯಿಲ್ಲ. ಪ್ರತಿಯೊಂದು ಆತ್ಮನ ಬಗ್ಗೆ ಸ್ವತಹವಾಗಿಯೇ ಹೃದಯದ ಈ ಗೀತೆ ಉತ್ಪನ್ನವಾಗುವುದು ಎಂದಿಗೂ ತಿರಸ್ಕಾರಕ್ಕೆ ಬರಲು ಸಾಧ್ಯವಿಲ್ಲ. ಯಾವಾಗ ಯಾರೇ ಗ್ಲಾನಿ ಮಾಡಿದರು ಕ್ರೋಧ ಬರಲು ಸಾಧ್ಯವಿಲ್ಲ. ಪ್ರಶ್ನೆಯೂ ಸಹ ಉತ್ಪನ್ನವಾಗಲು ಸಾಧ್ಯವಿಲ್ಲ. ಎಲ್ಲ ಪ್ರಶ್ನಾರ್ಥಕ ಚಿಹ್ನೆಯಿರುವುದೋ ಅಲ್ಲ ಅವಶ್ಯವಾಗಿ ಏರುಪೇರಾಗುವುದು ಪೂರ್ಣವಿರಾಮವನ್ನು ಇಡುವವರೇ ಪೂರ್ಣಾಂಕಗಳಿಂದ ಉತ್ತೀರ್ಣರಾಗುವರು. ಯಾರ ಬಳಿ ಶಕ್ತಿಗಳ ಸಂಗ್ರಹಣೆಯ ಸಂಪೂರ್ಣವಾಗಿ ಆಗಿರುತ್ತದೆಯೋ ಅವರೇ ಪೂರ್ಣವಿರಾಮವನ್ನು ಇಡಲು ಸಾಧ್ಯವಾಗುವುದು. ಒಳ್ಳೆಯದು! ಬಾಪ್ ದಾದಾರವರು ವಿದಾಯಿಯ ಸಮಯದಲ್ಲಿ ಎಲ್ಲಾ ಮಕ್ಕಳಿಗೂ ಹೋಲಿ ಹಬ್ಬದ ಶುಭಾಷಯಗಳನ್ನು ನೀಡಿದರು. ಹೋಲಿ ಮಕ್ಕಳಿಗಾಗಿ ಸದಾ ಹೋಲಿಯಾಗಿದೆ. ಸದಾಕಾಲವೂ ಜ್ಞಾನದ ರಂಗಿನಲ್ಲಿ ರಂಗಿತರಾಗಿದ್ದೀರಿ ಆದ್ದರಿಂದ ವಿಶೇಷವಾಗಿ ರಂಗನ್ನಾಕುವ ಅವಶ್ಯಕತೆಯೇ ಬರುವುದಿಲ್ಲ. ಇವರುಗಳಂತು ಹಾಕುವುದಿಲ್ಲ ಅಲ್ಲವೆ! ವಿದೇಶದಲ್ಲಿ ರಂಗನ್ನು ಹಾಕುವುದಿಲ್ಲ. ಅದಂತು ಮನೋರಂಜನೆಯಾಯಿತು. ಬಾಕಿ ರಂಗಿನಲ್ಲಿ ರಂಗಿತರಾಗಿ ಮಿಕ್ಕಿಮೌಸ್ ಆಗಬಾರದು. ಸದಾ ಹೋಲಿ ಹಂಸಗಳಾಗಿರಿ, ಹೋಲಿ ಆಗಿರುವವರು ಆಗಿದ್ದೀರಿ ಹಾಗೂ ಹೋಲಿಯನ್ನು ಆಚರಿಸುವವರಾಗಿದ್ದೀರಿ, ಅನ್ಯರನ್ನೂ ಹೋಲಿಯಾಗಿಸುವ ರಂಗನ್ನು ಹಾಕುವವರಾಗಿದ್ದೀರಿ. ಎಲ್ಲಾ ಮಕ್ಕಳಿಗೆ ಹೋಲಿಯ ಶುಭಾಷಯಗಳು ಹಾಗೂ ಜೊತೆ-ಜೊತೆಗೆ ಒಲವು-ಉತ್ಸಾಹವಿರುವ ಜೀವನದಲ್ಲಿ ಹಾರುವ ಕಾರಣ ಶುಭಾಷಯಗಳು, ಒಳ್ಳೆಯದು.

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 01-03-1990.

***ಬ್ರಾಹ್ಮಣ ಜೀವನದ ಬುನಾದಿ - ದಿವ್ಯ ಬುದ್ಧಿ ಮತ್ತು ಆತ್ಮಿಕ ದೃಷ್ಟಿ.***

ಬ್ರಾಹ್ಮಣ ಜನ್ಮದಿಂದಲೇ ದಿವ್ಯ ಬುದ್ಧಿ ಮತ್ತು ಆತ್ಮಿಕ ದೃಷ್ಟಿ ಎಂಬ ವರದಾನಗಳು ಜನ್ಮಸಿದ್ಧ ಅಧಿಕಾರವಾಗಿ ಪ್ರತಿಯೊಬ್ಬ ಮಗುವಿಗೂ ಪ್ರಾಪ್ತಿಯಾಗಿವೆ. ದಿವ್ಯ ಬುದ್ಧಿಯ ಮೂಲಕ ಸ್ವಯಂನ ಪ್ರತಿ, ಸೇವೆಯ ಪ್ರತಿ, ಬ್ರಾಹ್ಮಣ ಪರಿವಾರದ ಪ್ರತಿ, ಸಂಬಂಧ-ಸಂಪರ್ಕದ ಪ್ರತಿ, ಸದಾ ಮತ್ತು ಸ್ವತಹವಾಗಿ ನಿರ್ಣಯವು ಯಥಾರ್ಥವಾಗಿರುತ್ತದೆ ಮತ್ತು ಆ ಯಥಾರ್ಥ ನಿರ್ಣಯದಿಂದ ಸ್ವಯಂ ಸೇವೆ ಸಂಬಂಧ ಸಂಪರ್ಕವು ಯಥಾರ್ಥ ಶಕ್ತಿಶಾಲಿಯಾಗಿಬಿಡುತ್ತದೆ. ದಿವ್ಯ ಬುದ್ಧಿಯಿಂದ ಪ್ರತಿಯೊಂದು ಬ್ರಾಹ್ಮಣಾತ್ಮರನ್ನು ಪರಿಶೀಲಿಸಿ ಅರಿತು ಮುಂದುವರಿಸಬಹುದು. ಆತ್ಮಿಕ ದೃಷ್ಟಿಯಿಂದ ವೃತ್ತಿ, ವೃತ್ತಿಯಿಂದ ಕೃತಿ ಸ್ವತಹವಾಗಿ ಬದಲಾವಣೆಯಾಗುತ್ತದೆ ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ "ಆತ್ಮಿಕ ಸ್ಥಿತಿ"ಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಬ್ರಾಹ್ಮಣ ಜನ್ಮ ತೆಗೆದುಕೊಳ್ಳುತ್ತಲೇ ದಿವ್ಯ ಬುದ್ಧಿ ಮತ್ತು ಆತ್ಮಿಕ ದೃಷ್ಟಿ ಎಂಬ ಎರಡು ವರದಾನಗಳನ್ನು ಜನ್ಮಸಿದ್ಧ ಅಧಿಕಾರ ರೂಪದಲ್ಲಿ ಪಡೆದಿದ್ದೇನೆ.

2. ನಾನು ದಿವ್ಯ ಬುದ್ಧಿಯಿಂದ ಸ್ವಯಂಪ್ರತಿ, ಸೇವೆಯ ಪ್ರತಿ, ಬ್ರಾಹ್ಮಣ ಪರಿವಾರದ ಸಂಬಂಧ-ಸಂಸ್ಕಾರಗಳ ಪ್ರತಿ, ಸದಾ ಮತ್ತು ಸ್ವತಹವಾಗಿ ಪ್ರತಿ ವಿಷಯದಲ್ಲಿ ಯಥಾರ್ಥ ನಿರ್ಣಯವನ್ನು ತೆಗೆದುಕೊಂಡಿದ್ದೇನೆ.

3. ನಾನು ತಂದೆಯನ್ನು, ಸ್ವಯಂನ್ನು ಮತ್ತು ಪ್ರತೀ ಬ್ರಾಹ್ಮಣ ಆತ್ಮನನ್ನು ಯಾರು ಹೇಗಿದ್ದಾರೆಯೋ ಹಾಗೆ ತಿಳಿದುಕೊಂಡು ಅವರ ಸಂಪರ್ಕದಲ್ಲಿ ಬಂದು ಮುಂದಕ್ಕೆ ಕರೆದುಕೊಂಡು ಹೋಗಿ ತಂದೆಯಿಂದ ಸದಾ ಅಧಿಕಾರವನ್ನು ಪಡೆಯುತ್ತಿದ್ದೇನೆ.

4. ಬ್ರಾಹ್ಮಣತ್ಮನಾದ ನಾನು ದಿವ್ಯ ಬುದ್ಧಿಯಿಂದ ಮೂರು ಲೋಕಗಳ ಪರ್ಯಟನೆ ಮಾಡುತ್ತಿದ್ದೇನೆ.

5. ನಾನು ಮಾಸ್ಟರ್ ಸರ್ವ ಶಕ್ತಿವಂತನಾಗಿ ಪರಮಾತ್ಮನನ್ನು ಗುರುತಿಸಿ, ಮಿಲನ ಮಾಡಿಕೊಂಡು, ಪ್ರಾಪ್ತಿಯ ಅನುಭೂತಿಯನ್ನು ಮಾಡಿಕೊಂಡು, ಅಸಂಭವವನ್ನು ಸಂಭವ ಮಾಡಿಕೊಂಡು, ಪ್ರತೀ ಕರ್ಮದಲ್ಲಿ ತಂದೆಯ ಪವಿತ್ರ ಪ್ರೇರಣೆಯನ್ನು ಅನುಭವ ಮಾಡಿಕೊಂಡು, ಸಫಲತೆಯನ್ನು ಪಡೆದಿರುವ ದಿವ್ಯ ಬುದ್ಧಿ ಸ್ವರೂಪ.

6. ನಾನು ಮಾಯೆಯ ಸಫಲತೆಯ ವರಮಾಲೆಯನ್ನು ಧರಿಸಿರುವ ದಿವ್ಯ ಬುದ್ಧಿ ಸ್ವರೂಪ.

7. ನಾನು ಎಂತಹ ಸಮಯವೂ ಅಂತಹ ವಿಧಿಯಿಂದ ದಿವ್ಯ ಬುದ್ಧಿಯನ್ನು ಉಪಯೋಗಿಸಿ ಸರ್ವಸಿದ್ಧಿಗಳನ್ನು ಪಡೆದಿದ್ದೇನೆ.

8. ನನ್ನ ಲಕ್ಷಣಗಳಿಂದ ಸದಾ ಸುಖ, ಶಾಂತಿ, ಸಂತೋಷಗಳ ಹೊಳಪಿನಿಂದ ದುಃಖ, ಗೊಂದಲದಲ್ಲಿರುವ ಆತ್ಮನ ಭವಿಷ್ಯವನ್ನು ಶ್ರೇಷ್ಠವಾಗಿ ತಯಾರು ಮಾಡಿದ್ದೇನೆ.

9. ನಾನು ನನ್ನ ಮುಖವನ್ನು ಸಂತೋಷ, ಶಾಂತಿ, ಸುಖದಿಂದ ಶೃಂಗಾರ ಮಾಡಿಕೊಂಡಿರುವ ಪರಿಶ್ತಾ.

10. ನಾನು ಸಫಲತಾ ಮೂರ್ತಿ ಮತ್ತು ಯಥಾರ್ಥ ಸಹಜ ಪುರುಷಾರ್ಥಿ.